ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:52:ಕಟ್ಟಡ:2013-14

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:27.08.2016

## ಸುತ್ತೋಲೆ

ವಿಷಯ: ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ನಿರ್ಮಾಣ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ:ಇಡಿ/33/ಹೆಚ್‌ಪಿಯು/2014, ದಿ:22.08.2014
2. ಸರ್ಕಾರದ ಆದೇಶ ಸಂಖ್ಯೆ:ಇಡಿ/43/ಹೆಚ್‌ಪಿಟಿ/2014, ದಿ:29.12.2014

--*--

2013-14ನೇ ಸಾಲಿನ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ 51 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ನಿರ್ಮಾಣ ಮಾಡಲು ಉಲ್ಲೇಖ (1) ರಲ್ಲಿ ಆದೇಶಿಸಲಾಗಿರುತ್ತದೆ. 2014-15ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಒದಗಿಸಿದ ಅನುದಾನದಲ್ಲಿ 26 ವಿದ್ಯಾರ್ಥಿನಿಲಯಗಳನ್ನು ನಿರ್ಮಾಣ ಮಾಡಲು ಉಲ್ಲೇಖ (2) ರಲ್ಲಿ ಆದೇಶಿಸಲಾಗಿರುತ್ತದೆ. ಅದರಂತೆ ಈ ಕಛೇರಿಯಿಂದ ಎಲ್ಲಾ ಕಾಮಗಾರಿಗಳಿಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ದಿನಾಂಕ:09.08.2016 ರಂದು ನಡೆದ ವಿದ್ಯಾರ್ಥಿನಿಲಯ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿರ್ಮಾಣ ಸಂಸ್ಥೆಗಳು ಈ ಕೆಳಕಂಡ ಕಾಲೇಜುಗಳಲ್ಲಿ ವಿದ್ಯಾರ್ಥಿನಿಲಯ ನಿರ್ಮಾಣ ಕಾಮಗಾರಿಗಳನ್ನು ನಿವೇಶನಗಳ ಸಮಸ್ಯೆಯಿಂದ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

| ಕ್ರ.ಸಂ. | ಕಾಲೇಜಿನ ಹೆಸರು | ವಿದ್ಯಾರ್ಥಿನಿಲಯ ಮಾದರಿ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಸ.ಪ್ರ.ದ.ಕಾಲೇಜು, ರಾಮನಗರ | ಪುರುಷ | 99.00 |
| 2 | ಸ.ಪ್ರ.ದ.ಕಾಲೇಜು, ತುಮಕೂರು | ಪುರುಷ | 100.00 |
| 3 | ಸ.ಪ್ರ.ದ.ಕಾಲೇಜು, ಮಾಲೂರು | ಪುರುಷ | 99.00 |
| 4 | ಸ.ಮಹಿಳಾ ಪ್ರ.ದ.ಕಾಲೇಜು, ಭೈರಾಪುರ | ಮಹಿಳಾ | 98.00 |
| 5 | ಸರ್ಕಾರಿ ಕಲಾ ಕಾಲೇಜು, ಹಾಸನ | ಪುರುಷ | 99.10 |
| 6 | ಸ.ಪ್ರ.ದ.ಕಾಲೇಜು, ಕೊಳ್ಳೇಗಾಲ | ಪುರುಷ | 99.10 |
| 7 | ಸ.ಪ್ರ.ದ.ಕಾಲೇಜು, ಸಿದ್ಧಾಪುರ | ಪುರುಷ | 92.87 |
| 8 | ಸ.ಪ್ರ.ದ.ಕಾಲೇಜು, ಖಾನಾಪುರ | ಪುರುಷ | 99.60 |
| 9 | ಸ.ಪ್ರ.ದ.ಕಾಲೇಜು, ಪಡುವಲಹಿಪ್ಪೆ | ಪುರುಷ | 99.42 |
| 10 | ಸ.ಪ್ರ.ದ.ಕಾಲೇಜು, ಮಾಗಡಿ | ಪುರುಷ | 99.42 |
| 11 | ಸ.ಪ್ರ.ದ.ಕಾಲೇಜು, ಮಧುಗಿರಿ | ಪುರುಷ | 99.42 |
| 12 | ಸ.ಪ್ರ.ದ.ಕಾಲೇಜು, ಹೂವಿನ ಹಡಗಲಿ | ಪುರುಷ | 99.42 |
| 13 | ಸ.ಮಹಿಳಾ ಪ್ರ.ದ.ಕಾಲೇಜು, ಬಳ್ಳಾರಿ | ಮಹಿಳಾ | 99.42 |
| 14 | ಸ.ಪ್ರ.ದ.ಕಾಲೇಜು, ಸುರಪುರ | ಪುರುಷ | 99.42 |
| 15 | ಸ.ಪ್ರ.ದ.ಕಾಲೇಜು, ಮಾನ್ವಿ | ಪುರುಷ | 99.42 |
| 16 | ಸ.ಪ್ರ.ದ.ಕಾಲೇಜು, ಹುಮ್ನಾಬಾದ್ | ಪುರುಷ | 99.42 |

ನಿರ್ಮಾಣ ಕಾರ್ಯ ಶೀಘ್ರದಲ್ಲಿ ಪೂರ್ಣಗೊಳ್ಳಬೇಕಾಗಿರುವುದರಿಂದ ನಿವೇಶನವನ್ನು ಕೂಡಲೇ ಹಸ್ತಾಂತರಿಸಿ ವರದಿ ನೀಡುವಂತೆ ಹಾಗೂ ನಿವೇಶನವನ್ನು ಇದುವರೆವಿಗೂ ಹಸ್ತಾಂತರಿಸದಿರಲು ಕಾರಣ ಹಾಗೂ ಈ ಬಗ್ಗೆ ಕೈಗೊಂಡ ಕ್ರಮಗಳ ಪೂರ್ಣ ವರದಿಯನ್ನು ಕೂಡಲೇ ನೀಡುವಂತೆ ತಿಳಿಸಲಾಗಿದೆ. ವಿದ್ಯಾರ್ಥಿನಿಲಯಗಳ ನಿರ್ಮಾಣದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿರುವುದರಿಂದ ಆದ್ಯತೆ ಮೇರೆಗೆ ಮಾಹಿತಿಯನ್ನು ತುರ್ತಾಗಿ ಸಲ್ಲಿಸುವಂತೆ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

ಮೇಲ್ಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

*KRIDL SCP TSP Hostel Adm. Approval 1.Docx*

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ ಆನಂದರಾವ್ ವೃತ್ತ, ಬೆಂಗಳೂರು-560009
2. ಮುಖ್ಯ ಇಂಜಿನೀಯರ್‌ರವರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್. ವೃತ್ತ, ಬೆಂಗಳೂರು.
3. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ–ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಅಳವಡಿಸಲು.
5. ಕಛೇರಿ ಪ್ರತಿ